**ಓ.ಎಸ್. ನಂಃ 410/2023**

**ಪಿ.ಡಬ್ಲ್ಯೂಃ 1**

**ದಿನಾಂಕ 01.03.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರಃ ಶ್ರೀ ಟಿ.ಜಿ ವಕೀಲರಿಂದಃ**

1. ಪ್ರತಿವಾದಿಯನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸುಮಾರು 8-9 ವರ್ಷಗಳಿಂದ ನಾನು ಪ್ರತಿವಾದಿಯನ್ನು ನೋಡುತ್ತಿದ್ದೇನೆ ಎಂದು ಸ್ವತಃ ನುಡಿದಿರುತ್ತಾರೆ. ನಿಪಿ.1 ರ ದಾಖಲೆಯನ್ನು ನೀವು ಎಲ್ಲಿ ಬರೆಸಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಿಪಿ.1 ರ ದಾಖಲೆಯನ್ನು ಪ್ರತಿವಾದಿಯೇ ತಯಾರಿಸಿ ಮಿರ್ಲೆಯ ಉಪನೊಂದಣಾಧಿಕಾರಿಗಳ ಕಚೇರಿಯ ಬಳಿ ತಂದಿರುತ್ತಾರೆ ಎಂದು ನುಡಿದಿರುತ್ತಾರೆ.

2. ನಿಪಿ.1 ರ ದಾಖಲೆಯನ್ನು ಪ್ರತಿವಾದಿಯೇ ಪತ್ರ ಬರಹಗಾರರಿಗೆ ಹೇಳಿ ಬೆರಳಚ್ಚು ಮಾಡಿಸಿದ್ದು, ನಿಪಿ.1 ರ ದಾಖಲೆಯನ್ನು ತಯಾರಿಸುವಾಗ ನಾನು ಸಹ ಅಲ್ಲಿ ಹಾಜರಿದ್ದೆ. ನನಗೆ ಓದಲು ಬರುತ್ತದೆ. ನಿಪಿ.1 ರ ದಾಖಲೆಯನ್ನು ನಾನು ಓದಿ ನನ್ನ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಗೆ ಈಗ ಒಂದು ಮತದಾರರ ಗುರುತಿನ ಚೀಟಿ ಮತ್ತು ಆಧಾರ ಕಾರ್ಡನ್ನು ತೋರಿಸಿದ್ದು, ಅದರಲ್ಲಿ ಇರುವ ಪೊಟೋ ಪ್ರತಿವಾದಿಯ ಪೋಟೊ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಗಳನ್ನು ನಿಡಿ.1 ಮತ್ತು 2 ಎಂದು ಗುರುತಿಸಲಾಯಿತು.

3. ನಿಡಿ.1 ರ ದಾಖಲೆಯಲ್ಲಿ ಪ್ರತಿವಾದಿಯ ವಿಳಾಸವು ಮಂಡ್ಯದ ಬಸವನಹಳ್ಳಿ ಗ್ರಾಮ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಯು ಪ್ರಸ್ತುತ ಲಿಂಗದೇವರಕೊಪ್ಪಲಿನಲ್ಲಿ ವಾಸಿಸುತ್ತಿದ್ದು, ನಿಡಿ.2 ರ ದಾಖಲೆಯಲ್ಲಿ ಪ್ರತಿವಾದಿಯ ಪ್ರಸ್ತುತ ವಿಳಾಸ ನಮೂದಾಗಿರುತ್ತದೆ ಎಂದರೆ ಸರಿ. ಈಗ ಸುಮಾರು 10 ವರ್ಷಗಳಿಂದ ಪ್ರತಿವಾದಿಯು ಲಿಂಗದೇವರಕೊಪ್ಪಲಿನಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಯು ಕೆ.ಎಸ್.ಆರ್.ಟಿ.ಸಿ ಯಲ್ಲಿ ಡ್ರೈವರ್ ಕಂ ಕಂಡಕ್ಟರ್ ಅಂತ ಕೆಲಸ

ಮಾಡಿಕೊಂಡು ಲಿಂಗದೇವರಕೊಪ್ಪಲು ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ.

4. ನಿಪಿ.2 ರ ನೋಟಿಸು ನಿಪಿ.4 ಪ್ರಕಾರ Insufficient Address ಎನ್ನುವ ಹಿಂಬರಹದೊಂದಿಗೆ ಜಾರಿಯಾಗದೆ ವಾಪಸ್ಸಾಗಿರುತ್ತದೆ ಎಂದರೆ ಸರಿ. ನಿಪಿ.2 ರ ನೋಟಿಸನ್ನು ನಾನು "ಮಂಜುನಾಥ.ಬಿ.ಸಿ ಬಿನ್ ಚನ್ನಾಚಾರಿ, ಸೋಮನಾಥಪುರ ಗ್ರಾಮ, ಅಕ್ಕಿಹೆಬ್ಬಾಳು ಹೋಬಳಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ" ಈ ವಿಳಾಸಕ್ಕೆ ಕಳುಹಿಸಿರುತ್ತೇನೆ ಎಂದರೆ ಸರಿ. ನಿಪಿ.1 ರ ದಾಖಲೆಯಲ್ಲಿಯೂ ಸಹ "ಸೋಮನಾಥಪುರ ಗ್ರಾಮದ ನಿವಾಸಿ ಚನ್ನಾಚಾರಿ ರವರ ಮಗ ಮಂಜುನಾಥ" ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿವಾದಿಯು ನನಗೆ ತಮ್ಮ ಆಧಾರ ಕಾರ್ಡಿನ ಒಂದು ಜೆರಾಕ್ಸ ಪ್ರತಿಯನ್ನು ನೀಡಿದ್ದು, ಸದರಿ ಆಧಾರ ಕಾರ್ಡಿನಲ್ಲಿ ಪ್ರತಿವಾದಿಯ ವಿಳಾಸವು ಸೋಮನಾಥಪುರ ಎಂದು ನಮೂದಾಗಿತ್ತು ಎಂದು ಸಾಕ್ಷಿಯು ಸ್ವತಃ ನುಡಿದಿರುತ್ತಾರೆ. ಪ್ರತಿವಾದಿಯು ನನಗೆ ನೀಡಿದ್ದ ಸೋಮನಾಥಪುರ ವಿಳಾಸದ ಸದರಿ ಆಧಾರ ಕಾರ್ಡನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

5. ನಿಪಿ.1 ರ ದಾಖಲೆಯನ್ನು ರಾತ್ರಿ 7.45 ಗಂಟೆಗೆ ತಯಾರಿಸಿರುತ್ತಾರೆ. ರಾತ್ರಿ 7.45 ಗಂಟೆಯ ಸಮಯಕ್ಕೆ ಯಾವುದೇ ದಸ್ತಾವೇಜು ಬರಹಗಾರರ ಕಚೇರಿ ತೆರೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ರ ದಸ್ತಾವೇಜು ಬರಹಗಾರರ ಕಚೇರಿಯು ಮಿರ್ಲೆ ಉಪನೊಂದಣಾಧಿಕಾರಿಗಳ ಕಚೇರಿಯ ಮುಂದೆ ಇರುತ್ತದೆ. ಸದರಿ ದಸ್ತಾವೇಜು ಬರಹಗಾರರ ಕಚೇರಿಯ ಹೆಸರು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯೇ ನನ್ನನ್ನು ದಸ್ತಾವೇಜು ಬರಹಗಾರರ ಕಚೇರಿಗೆ ಕರೆದುಕೊಂಡು ಹೋಗಿರುತ್ತಾರೆ.

6. ನಿಪಿ.1 ರ ದಸ್ತಾವೇಜು ಬರಹಗಾರರ ವಯಸ್ಸು ಅಂದಾಜು 38 ರಿಂದ 40 ವರ್ಷವಾಗಿರಬಹುದು. ನಾನು ಮೊದಲು ಕೆ.ಆರ್.ನಗರದಲ್ಲಿ ವಾಸವಿದ್ದು, ಪ್ರಸ್ತುತ ಮೈಸೂರಿನಲ್ಲಿ ವಾಸವಿದ್ದೇನೆ. ಸುಮಾರು ಈಗ 6-7 ತಿಂಗಳಿಂದ ನಾನು ಮೈಸೂರಿನಲ್ಲಿ ವಾಸವಿದ್ದೇನೆ. 2021 ರಲ್ಲಿ ನಾನು ನಾನು ಕೆ.ಆರ್.ನಗರದಲ್ಲಿ ವಾಸವಿದ್ದ ಕಾರಣ, ಕೆ.ಆರ್.ನಗರದ ಪತ್ರ ಬರಹಗಾರರೊಂದಿಗೆ ನಿಪಿ.1 ರ ದಾಖಲೆಯನ್ನು ಬರೆಸುತ್ತಿದ್ದೆ ಹಾಗೂ ನಿಪಿ.1 ರ ದಾಖಲೆ ನಾನು ಸೃಷ್ಟಿಸಿದ ದಾಖಲೆಯಾಗಿರುವುದರಿಂದ ಅದನ್ನು

ಮಿರ್ಲೆಯ ಪತ್ರ ಬರಹಗಾರರೊಂದಿಗೆ ತಯಾರಿಸಿರುತ್ತೇನೆ ಎಂದರೆ ಸಾಕ್ಷಿಯು ಸದರಿ ದಿನದಂದು ಕೆ.ಆರ್.ನಗರದ ಪತ್ರ ಬರಹಗಾರರು ಲಭ್ಯವಿರದ ಕಾರಣ ಪ್ರತಿವಾದಿಯೇ ನನ್ನನ್ನು ಮಿರ್ಲೆಯ ಪತ್ರ ಬರಹಗಾರರ ಕಚೇರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ.

7. ಕೃತಿಕಾ.ಆರ್ ನನ್ನ ಮಗಳು ಎಂದರೆ ಸರಿ. ನನ್ನ ಮಗಳಾದ ಕೃತಿಕಾ ರವರ ಗಂಡನಾದ ದರ್ಶನ ಮತ್ತು ಪ್ರತಿವಾದಿ ಒಳ್ಳೇಯ ಸ್ನೇಹಿತರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಅಳಿಯನಾದ ದರ್ಶನ ರವರು ಏನು ಕೆಲಸ ಮಾಡುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ದರ್ಶನ್ ರವರು ಇನಶುರೆನ್ಸ ಅಂಗಡಿಯನ್ನು ಇಟ್ಟುಕೊಂಡಿದ್ದು, ಸದರಿ ದರ್ಶನ್ ರವರೊಂದಿಗೆ ನನ್ನ ಮಗಳು ಪ್ರೇಮ ವಿವಾಹವಾಗಿದ್ದು, ವಿವಾಹವಾದ 2 ದಿನಗಳಲ್ಲಿಯೇ ದರ್ಶನ ರವರು ನನ್ನ ಮಗಳನ್ನು ಬಿಟ್ಟು ಹೋಗಿರುವ ಕಾರಣ ನನಗೆ ಅವರ ಉದ್ಯೋಗದ ಬಗ್ಗೆ ಸರಿಯಾದ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

8. ದರ್ಶನ್ ರವರು ಕೆ.ಆರ್.ನಗರದ ಬಜಾರ್ ರಸ್ತೆಯಲ್ಲಿ ಇನ್ಸುರೆನ್ಸ ಅಂಗಡಿ ನಡೆಸುತ್ತಿದ್ದರು. ದರ್ಶನ್ ರವರ ಸ್ವಂತ ಊರು ಮೈಸೂರಿನ ಚತ್ರದಕೊಪ್ಪಲು ಗ್ರಾಮವಾಗಿರುತ್ತದೆ. ನನ್ನ ಅಳಿಯನಾದ ದರ್ಶನ್ ರವರು ನಮ್ಮೊಂದಿಗೆ ಕೆ.ಆರ್.ನಗರದಲ್ಲಿ ಜೊತೆಯಾಗಿ ವಾಸವಿದ್ದರು ಎಂದರೆ ಸರಿಯಲ್ಲ. ದರ್ಶನ್ ರವರು ನಮ್ಮ ಮನೆಯಲ್ಲಿ ವಾಸವಿದ್ದಾಗ ತಮ್ಮ ದಾಖಲೆಗಳನ್ನು ನಮ್ಮ ಮನೆಯಲ್ಲಿಯೇ ಇಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದರ್ಶನ್ ರವರು ಎಂದಿಗೂ ಸಹ ನಮ್ಮ ಮನೆಯಲ್ಲಿ ವಾಸವಿರಲಿಲ್ಲ ಎಂದು ಸ್ವತಃ ನುಡಿದಿರುತ್ತಾರೆ.

9. ನನ್ನ ಮಗಳು ಮತ್ತು ದರ್ಶನ್ ರವರ ಮಧ್ಯೆ ವೈವಾಹಿಕ ಕಲಹ ಉಂಟಾದಾಗ ನಾವು ದರ್ಶನರವರನ್ನು ಮನೆಯಿಂದ ಹೊರಹಾಕಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದರ್ಶನ್ ರವರು ಮದುವೆಯ 2 ದಿನಗಳ ನಂತರ ಸ್ವತಃ ಬೆಂಗಳೂರಿಗೆ ಹೋಗಿದ್ದು, ಅದಾದನಂತರದಲ್ಲಿ ಅವರು ವಾಪಸ್ಸು ಬಂದಿರುವುದಿಲ್ಲ ನುಡಿದಿರುತ್ತಾರೆ. ದರ್ಶನ ಮತ್ತು ಪ್ರತಿವಾದಿಯ ಮಧ್ಯೆ ಇದ್ದ ವ್ಯವಹಾರಿಕ ದಾಖಲೆಗಳು ನನ್ನ ಮನೆಯಲ್ಲಿಯೇ ಉಳಿದುಕೊಂಡಿದ್ದವು ಎಂದರೆ ಸರಿಯಲ್ಲ.

10. ನಾನು ದರ್ಶನರವರ ಮುಖಾಂತರ ಹಣಕಾಸಿನ ವ್ಯವಹಾರವನ್ನು ಮಾಡಿಸುತ್ತಿದ್ದೆ ಎಂದರೆ ಸರಿಯಲ್ಲ. ನಿಪಿ.1 ರ ಪ್ರೋನೋಟ್ ಮತ್ತು ಪ್ರತಿವಾದಿಗೆ ಸೇರಿದ ಕೆ.ಆರ್.ಪೇಟೆ ಶಾಖೆಯ ಕೆನರಾ ಬ್ಯಾಂಕಿನ ಚೆಕ್ ಸಂಖ್ಯೆ 144842 ಇವೆರಡನು ದರ್ಶನರವರು ನನ್ನ ಮನೆಯಲ್ಲಿ ಇಟ್ಟಿದ್ದರು ಎಂದರೆ ಸರಿಯಲ್ಲ. ದರ್ಶನ ಮತ್ತು ಪ್ರತಿವಾದಿಯ ಮದ್ಯೆ ಇದ್ದ ಹಣಕಾಸಿನ ವ್ಯವಹಾರವು ಮುಕ್ತಾಯವಾಗಿದ್ದರು ಸಹ ಪ್ರತಿವಾದಿಯ ದಾಖಲೆಗಳು ದರ್ಶನ್ ರವರ ಬಳಿ ಇದ್ದು, ಅದನ್ನು ದರ್ಶನರವರು ನಮ್ಮ ಮನೆಯಲ್ಲಿಯೇ ಇಟ್ಟಿದ್ದರು ಎಂದರೆ ಸರಿಯಲ್ಲ.

11. ತಮ್ಮ ದಾಖಲಾತಿಗಳು ದರ್ಶನರವರ ಬಳಿ ಇದ್ದು, ಅದನ್ನು ದರ್ಶನರವರು ವಾಪಸ್ಸು ನೀಡಿರದ ಕಾರಣ ಪ್ರತಿವಾದಿಯು ಮೈಸೂರಿನ ವಿಜಯನಗರ ಪೋಲಿಸ್ ಠಾಣೆಯಲ್ಲಿ ದರ್ಶನರವರ ವಿರುದ್ದ ದೂರನ್ನು ದಾಖಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಯ ದಾಖಲೆಗಳು ತಾವು ನಮ್ಮ ಮನೆಯಲ್ಲಿ ಇಟ್ಟಿರುವುದಾಗಿ ದರ್ಶನ ರವರು ಪೋಲಿಸ್ ಠಾಣೆಯಲ್ಲಿ ಹೇಳಿಕೆಯನ್ನು ನೀಡಿ ಸ್ವೀಕೃತಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

12. ನನಗೆ ಮತ್ತು ಪ್ರತಿವಾದಿಗೆ ನೇರವಾದ ಹಣಕಾಸಿನ ವ್ಯವಹಾರ ನಡೆದಿದ್ದರೆ ನಾನು ಪ್ರತಿವಾದಿಯ ಸರಿಯಾದ ವಿಳಾಸವನ್ನು ನಿಪಿ.1 ಮತ್ತು ನಿಪಿ.2 ರ ದಾಖಲೆಗಳಲ್ಲಿ ನಮೂದಿಸುತ್ತಿದ್ದೆ ಎಂದರೆ ಸಾಕ್ಷಿಯು ಪ್ರತಿವಾದಿಯು ನೀಡಿದ ಆಧಾರ ಕಾರ್ಡನ ಪ್ರತಿಯಲ್ಲಿ ಇದ್ದ ಅವರ ವಿಳಾಸವನ್ನು ನಾನು ನಮೂದಿಸಿರುತ್ತೇನೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

13. ದರ್ಶನ ಮತ್ತು ಪ್ರತಿವಾದಿಯ ಮದ್ಯೆ ನಡೆದಿದ್ದ, ಹಣಕಾಸಿನ ವ್ಯವಹಾರದ ಸಂಬಂದ ಪ್ರತಿವಾದಿಯು ಖಾಲಿ ಛಾಪಾ ಕಾಗದಕ್ಕೆ ತಮ್ಮ ಸಹಿಯನ್ನು ಹಾಕಿ ದರ್ಶನರವರಿಗೆ ನೀಡಿದ್ದ ದಾಖಲೆಯನ್ನು ನಿಪಿ.1 ರ ದಾಖಲೆಯಲ್ಲಿ ನಾನು ಸುಳ್ಳಾಗಿ ಸೃಷ್ಟಿಸಿ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ.1 ರ ದಾಖಲೆಯನ್ನು ಪ್ರತಿವಾದಿಯೇ ನನಗೆ ಬರೆದುಕೊಟ್ಟಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

14. ಈ ದಾವೆಯನ್ನು ಹೂಡುವ ಕಾಲಕ್ಕೆ ನಿಪಿ.1 ರ ದಾಖಲೆಗೆ ನಾನು ಸಾಕ್ಷಿದಾರರ ಸಹಿಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರಸ್ತುತ ಮೈಸೂರಿನ ಕುಮಾರ ಬೀಡಿನ ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ನನಗೆ ನಿಪಿ.1 ರ ಸಾಕ್ಷಿದಾರರ ಪರಿಚಯವೇ ಇಲ್ಲ. ನಿಪಿ.1 ರ ಛಾಪಾ ಕಾಗದವನ್ನು ಸಂಜೆ 5.35 ಕ್ಕೆ ಮೈಸೂರಿನಲ್ಲಿ ಖರೀದಿಸಿಲಾಗಿರುತ್ತದೆ ಎಂದರೆ ಸರಿ. ನಿಪಿ.1 ರ ದಾಖಲೆಯಲ್ಲಿ ದಿನಾಂಕವನ್ನು 02.08.2021 ಎಂದು ನಮೂದು ಮಾಡಿರುವುದರಿಂದ ಸದರಿ ದಿನ ಸಂಜೆ 7.45 ಕ್ಕೆ ನಿಪಿ.1 ರ ದಾಖಲೆ ಬರೆಯಲಾಗಿರುತ್ತದೆ ಎಂದು ನಾನು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ನಿಪಿ.1 ರ ದಾಖಲೆಯನ್ನು ಸದರಿ ದಿನದಂದು ಸಂಜೆ 7.45 ಕ್ಕೆ ಬರೆದಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ.1 ರ ಸಾಕ್ಷಿದಾರರನ್ನು ನ್ಯಾಯಾಲಯದಲ್ಲಿ ಕರೆದು ಸಾಕ್ಷಿ ವಿಚಾರಣೆ ಮಾಡಲು ನನಗೆ ತೊಂದರೆ ಇಲ್ಲ.

15. ನಿಪಿ.1 ರ ದಾಖಲೆಯ ಆನ್ ಡಿಮಾಂಡ್ ಪ್ರೊನೋಟ್ ಬರೆದ ಭಾಗಕ್ಕೆ ಪ್ರತಿವಾದಿಯ ಸಹಿ ಇಲ್ಲ ಎಂದರೆ ಸರಿ. ನಿಪಿ.1 ರ ಖಾಲಿ ಛಾಪಾ ಕಾಗದದಲ್ಲಿ ಇದ್ದ ಪ್ರತಿವಾದಿಯ ಸಹಿಗೆ ತಾಳೆ ಹೊಂದುವ ಹಾಗೆ ನಾನು ನಿಪಿ.1 ರ ಬರವಣಿಗೆಗಳನ್ನು ಬೆರಳಚ್ಚು ಮಾಡಿ ಪ್ರಿಂಟ್ ತೆಗೆಸಿರುತ್ತೇನೆ ಹಾಗಾಗಿ ಆನ್ ಡಿಮಾಂಡ್ ಪ್ರೊನೋಟ್ ಬರೆದ ಭಾಗದಲ್ಲಿ ಪ್ರತಿವಾದಿಯ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ಎಂದಿಗೂ ಸಹ ಪ್ರತಿವಾದಿಗೆ ಫೋನ್ ಕರೆ ಮಾಡಿ ಹಣ ವಾಪಸ್ಸು ಕೊಡುವಂತೆ ಕೇಳಿರುವುದಿಲ್ಲ ಬದಲಾಗಿ ನಾನು ನೇರವಾಗಿ ಪ್ರತಿವಾದಿಯನ್ನು ಭೇಟಿಯಾಗಿ ಹಣ ವಾಪಸ್ಸು ಕೇಳಿರುತ್ತೇನೆ.

16. ನಾನು ಎಂದಿಗೂ ಸಹ ಪ್ರತಿವಾದಿಯೊಂದಿಗೆ ನೇರ ವ್ಯವಹಾರ ಮಾಡಿರದ ಕಾರಣ ಪ್ರತಿವಾದಿಗೆ ಎಂದಿಗೂ ಫೋನ್ ಕರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ತಾಯಿ ಮತ್ತು ಹೆಂಡತಿ ಮಕ್ಕಳ ಹೆಸರು ನನಗೆ ಗೊತ್ತಿಲ್ಲ ಕಾರಣ ನನಗೆ ಕೇವಲ ಪ್ರತಿವಾದಿಯ ಪರಿಚಯ ಮಾತ್ರ ಇರುತ್ತದೆ. ಸಾಮಾನ್ಯವಾಗಿ ಯಾವ ವ್ಯಕ್ತಿಗೆ ಸಾಲ ಕೊಡುತ್ತೇವೆಯೋ ಸದರಿ ವ್ಯಕ್ತಿಯ ಕುಟುಂಬಸ್ಥರ ವಿವರಗಳನ್ನು ತಿಳಿದ ನಂತರದಲ್ಲಿ ಸಾಲವನ್ನು ಕೊಡುತ್ತೇವೆ ಎಂದರೆ ಸರಿಯಲ್ಲ. ನಾನು ನಿಪಿ.2 ರ ನೋಟಿಸನ್ನು ಪ್ರತಿವಾದಿಯ ಸರಿಯಾದ ವಿಳಾಸಕ್ಕೆ ಕಳುಹಿಸಿದ್ದರೆ ಪ್ರತಿವಾದಿಯು ಅದಕ್ಕೆ ಸೂಕ್ತ ಉತ್ತರವನ್ನು ನೀಡುತ್ತಿದ್ದರು ಎಂದರೆ ಸಾಕ್ಷಿಯು ಪ್ರತಿವಾದಿ ನೀಡಿದ್ದ ತಮ್ಮ ಆಧಾರ ಕಾರ್ಡ್ನ ವಿಳಾಸಕ್ಕೆ ನಾನು ನೋಟಿಸು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ.

17. ನಿಪಿ.4 ರ ನೋಟಿಸು Insufficient Address ಎನ್ನುವ ಹಿಂಬರಹದೊಂದಿಗೆ ವಾಪಸ್ಸಾದ ನಂತರ ನಾನು ಪ್ರತಿವಾದಿಯ ಗ್ರಾಮಕ್ಕೆ ಮತ್ತು ಪ್ರತಿವಾದಿಯ ಮೈಸೂರಿನ ವಿಳಾಸಕ್ಕೆ ಹೋಗಿ ವಿಚಾರಿಸಿದ್ದು, ಪ್ರತಿವಾದಿಯು ತಮ್ಮ ಕೆಲಸಕ್ಕೆ ಹೋಗಿರುತ್ತಾರೆ ಎಂದು ಹೇಳಿರುತ್ತಾರೆ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಾನು ಪ್ರತಿವಾದಿಯ ಗ್ರಾಮಕ್ಕೆ ಮತ್ತು ಮೈಸೂರಿನ ವಿಳಾಸಕ್ಕೆ ಹೋಗಿದ್ದು, ಸದರಿ ವಿಳಾಸಗಳನ್ನು ನಾನು ವಾದಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿವಾದಿಯ ಆಧಾರಕಾರ್ಡನಲ್ಲಿ ಇದ್ದ ವಿಳಾಸವನ್ನು ನಮೂದಿಸಿರುತ್ತೇನೆ ಎಂದು ನುಡಿದಿರುತ್ತಾರೆ.

18. ನಿಪಿ.4 ರ ನೋಟಿಸು Insufficient Address ಎನ್ನುವ ಹಿಂಬರಹದೊಂದಿಗೆ ವಾಪಸ್ಸಾದ ನಂತರ ನಾನು ಪ್ರತಿವಾದಿಯ ಗ್ರಾಮಕ್ಕೆ ಮತ್ತು ಪ್ರತಿವಾದಿಯ ಮೈಸೂರಿನ ವಿಳಾಸಕ್ಕೆ ಹೋದ ಬಗ್ಗೆ ನನ್ನ ವಕೀಲರಿಗೆ ಮಾಹಿತಿ ನೀಡಿರುವುದಿಲ್ಲ. ನನಗೆ ಪ್ರತಿವಾದಿಯ ವಿಳಾಸ ಗೊತ್ತಿರದ ಕಾರಣ ನಾನು ಪ್ರತಿವಾದಿಯ ಸರಿಯಾದ ವಿಳಾಸವನ್ನು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯ ಆಧಾರಕಾರ್ಡನಲ್ಲಿ ಇದ್ದ ವಿಳಾಸವನ್ನು ನಮೂದಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ಮತ್ತು ಪ್ರತಿವಾದಿಯರ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ಆಗದ ಕಾರಣ ಈ ದಾವೆಯಲ್ಲಿ ಕೇಳಿರುವ ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಸಹಿ ಇದ್ದ ಖಾಲಿ ಛಾಪಾ ಕಾಗದಕ್ಕೆ ನಾನು, ದಸ್ತಾವೇಜು ಬರಹಗಾರರು ಮತ್ತು ಸಾಕ್ಷಿದಾರರು ಸೇರಿ ನಿಪಿ.1 ರ ಬರವಣಿಗೆಗಳನ್ನು ಬರೆಸಿ ನಿಪಿ.1 ರ ದಾಖಲೆಯನ್ನು ಸೃಷ್ಠಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**